ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ
ಸಿ.ಸಿ. ನಂ. 612/2023

| | | | |
|---|---|---|---|
| ಹೆಸರು | : | ಹೆಚ್.ಇ.ವೆಂಕಟ್ | ಪಿಡಬ್ಲ್ಯೂ-3 |
| ಗಂಡನ ಹೆಸರು | : | ಈರಯ್ಯ | ಸಿಡಬ್ಲ್ಯೂ-1 |
| ವಯಸ್ಸು | : | 60 ವರ್ಷ | |
| ವೃತ್ತಿ | : | ನಿವೃತ್ತ ಪೊಲೀಸ್ ಉಪನಿರೀಕ್ಷರು | |
| ವಾಸ ಸ್ಥಳ | : | ಮಡಿಕೇರಿ | |

ದಿಃ14.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.ಸಿ

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:

ದಿನಾಂಕ ಆಗಸ್ಟ 2021 ರಿಂದ ನವೆಂಬರ್ 2023ರ ತನಕ ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ದಿನಾಂಕ 11.08.2023ರಂದು ನಾನು ಠಾಣಾ ಉಸ್ತುವಾರಿಯಲ್ಲಿರುವಾಗ್ಗೆ ಮಧ್ಯಾಹ್ನ 2.30ಗಂಟೆಗೆ ಕೂತಿ ಗ್ರಾಮದ ತಮಯ್ಯ ಎಂಬುವವರು ಕಳ್ಳಬಟ್ಟಿ ಸಾರಾಯಿ ತಯಾರಿಸಿ ಮಾರಾಟ ಮಾಡುತ್ತಾರೆಂದು ಬಾತ್ಮಿದಾರರಿಂದ ಮಾಹಿತಿ ಬಂದ ಮೇರೆಗೆ ಪೊಲೀಸ್ ನಿರೀಕ್ಷಕರವರ ಮಾರ್ಗದರ್ಶನದ ಮೇರೆಗೆ ಇಲಾಖಾ ಜೀಪಿನಲ್ಲಿ ಠಾಣಾ ಸಿಬ್ಬಂದಿಯವರಾದ ಚಾಸಾ-4 ರಿಂದ 6ರವರೊಂದಿಗೆ ಹೊರಟು ಮದ್ಯಾಹ್ನ 3.30ರ ಸಮಯಕ್ಕೆ ಕೂತಿ ಗ್ರಾಮಕ್ಕೆ ತಲುಪಿ ತಮ್ಮಯ್ಯರವರ ಮನೆಯಿಂದ ಸ್ವಲ್ಪ ದೂರಕ್ಕೆ ವಾಹನವನ್ನು ನಿಲ್ಲಿಸಿ ಪಂಚರಾದ ಚಾಸಾ2 ಮತ್ತು 3ರವರಿಗೆ ಶೋಧನೆಯ ಬಗ್ಗೆ ಮಾಹಿತಿಯನ್ನು ತಿಳಿಸಿ ಪಂಚರಾಗಲು ಒಪ್ಪಿದ ಮೇರೆ ಅವರಿಗೆ ನೋಟಿಸನ್ನು ಜಾರಿ ಮಾಡಲಾಯಿತು.

2. ನಂತರ ಪಂಚರ ಸಮಕ್ಷಮದಲ್ಲಿ ಸಿಬ್ಬಂದಿಳೊಂದಿಗೆ ತಮ್ಮಯ್ಯ ರವರ ಮನೆಯ ಬಳಿ ಹೋದಾಗ ತಮ್ಮಯ್ಯರವರು ಮನೆಯ ಹತ್ತಿರ ಇದ್ದು, ಅವರಿಗೆ ಕಳ್ಳಬಟ್ಟಿ ತಯಾರಿಸಿ ಮಾರಾಟ ಮಾಡುವ ಬಗ್ಗೆ ಮಾಹಿತಿ ಇರುತ್ತದೆ, ಶೋಧನಾ ಮಾಡಬೇಕೆಂದು ತಿಳಿಸಿ, ಅವರ ಮನೆ ಸುತ್ತ-ಮುತ್ತ ಶೋಧನೆ ಮಾಡಿದಾಗ ಮನೆಯ ಎಡಭಾಗದಲ್ಲಿ ಜೋಡಿಸಿಟ್ಟಿರುವ ಕೊಟ್ಟಿಗೆಯಲ್ಲಿ ಒಂದು ಪ್ಲಾಸ್ಟಿಕ್ ಡ್ರಮ್ ನಲ್ಲಿ ಕಂದು ಬಣ್ಣದ ಹುಳಿ ಮತ್ತು ಘಾಟು ವಾಸನೆಯಿಂದ ಕೂಡಿದ ದ್ರಾವಣ ಇದ್ದು, ಇದನ್ನು ಪಂಚರ ಸಮಕ್ಷಮ

ಪರಿಶೀಲಿಸಲಾಗಿ ಕಳ್ಳಬಟ್ಟಿ ತಯಾರಿಸಲು ಮಾಡಿರುವ ದ್ರಾವಣವಾಗಿರುತ್ತದೆ ಎಂದು ಪಂಚರು ಅಭಿಪ್ರಾಯಪಟ್ಟಿರುತ್ತಾರೆ. ನಂತರ ತಮ್ಮಯ್ಯರವರನ್ನು ವಿಚಾರ ಮಾಡಲಾಗಿ, ಕಳ್ಳಬಟ್ಟಿ ತಯಾರಿಸಿ ಮಾರಾಟ ಮಾಡಲು ಪುಳಗಂಜಿಯನ್ನು ತಯಾರಿಸಿದ್ದನ್ನು ತಿಳಿಸಿರುತ್ತಾರೆ, ಪುಳಗಂಜಿಯನ್ನು ಇಟ್ಟಿದ್ದ ಜಾಗದ ಪಕ್ಕದಲ್ಲಿ ಸದರಿ ಕೊಟ್ಟಿಗೆಯ ಒಂದು ಮೂಲೆಯಲ್ಲಿ ಕಲುಗಳನ್ನು ಜೋಡಿಸಿ ಒಲೆ ಮಾಡಿ, ಅದರ ಮೇಲೆ ಇಡ್ಲಿಪಾತ್ರೆಯು ಇಟ್ಟಿದ್ದು, ಇಡ್ಲಿಪಾತ್ರೆಯ ಮುಚ್ಚಳವನ್ನು ಉಲ್ಟಾ ಇಟ್ಟಿದ್ದು, ಮುಚ್ಚಳದಲ್ಲಿ ನೀರು ಹಾಕಿರುವುದು ಕಂಡು ಬರುತ್ತದೆ.

3. ನಂತರ ಮುಚ್ಚಳವನ್ನು ತೆರೆದು ನೋಡಿದಾಗ ಇಡ್ಲಿಪಾತ್ರೆಯ ಒಳಗೆ ತಟ್ಟೆಯ ಮೇಲ್ಭಾಗದಲ್ಲಿ ಒಂದು ಸ್ಟೀಲ್ ಬಟ್ಟಲನ್ನು ಇಟ್ಟು, ತಟ್ಟೆಯ ಕೆಳಭಾಗ ಪುಳಗಂಜಿಯನ್ನು ಹಾಕಿ ಕಳ್ಳಬಟ್ಟಿಯನ್ನು ತಯಾರು ಮಾಡಲು ಇಟ್ಟಿರುವುದು ಕಂಡು ಬಂದಿರುತ್ತದೆ. ಪುಳಗಂಜಿ ಇದ್ದ ಪ್ಲಾಸ್ಟಿಕ್ ಡ್ರಮ್ ನಲ್ಲಿ ಸುಮಾರು 15 ಲೀ ನಷ್ಟು ಪುಳಗಂಜಿ ಇದ್ದು, ಇದನ್ನು ವಿಧಿ-ವಿಜ್ಞಾನ ಪ್ರಯೋಗಶಾಲೆಗೆ ಕಳುಹಿಸುವ ಸಲುವಾಗಿ ಸುಮಾರು 200 ಮಿಲಿಯಷ್ಟು ಪುಳಗಂಜಿಯನ್ನು ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಹಾಕಿ, ಮುಚ್ಚಳ ಹಾಕಿ, ಅದರ ಬಾಯಿಗೆ ಬಟ್ಟೆಯನ್ನು ಸುತ್ತಿ ಕಟ್ಟಿ, ಅರಗು ಹಕಿ ಎಸ್. ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಲಾಯಿತು, ನಂತರ ಇಡ್ಲಿಪಾತ್ರೆಯಲ್ಲಿ ಇಟ್ಟಿದ್ದ 2 ಲೀ ನಷ್ಟು ಪುಳಗಂಜಿಯಲ್ಲಿ ವಿಧಿ-ವಿಜ್ಞಾನ ಕಳುಹಿಸಲು 200 ಮಿಲಿಯಷ್ಟು ಮಿಲಿಯಷ್ಟು ಪುಳಗಂಜಿಯನ್ನು ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಹಾಕಿ, ಮುಚ್ಚಳ ಹಾಕಿ, ಅದರ ಬಾಯಿಗೆ ಬಟ್ಟೆಯನ್ನು ಸುತ್ತಿ ಕಟ್ಟಿ, ಅರಗು ಹಕಿ ಎಸ್. ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಲಾಯಿತು, ಉಳಿದ ಪುಳಗಂಜಿಯನ್ನು ಮೇಲಾಧಿಕಾರಿಗಳ ಮೌಖಿಕ ಆದೇಶದಂತೆ ಸ್ಥಳದಲ್ಲಿ ನಾಶಪಡಿಸಲಾಯಿತು. ನಂತರ ಆರೋಪಿಯನ್ನು ವಶಕ್ಕೆ ಪಡೆದುಕೊಂಡು ಪುಳಗಂಜಿ ತುಂಬಿಸಿದ್ದ ಖಾಲಿ ಮಾಡಿದ ಸುಮಾರು 20 ಲೀ ನಷ್ಟು ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಡ್ರಮ್ ಮತ್ತು ಕಳ್ಳಬಟ್ಟಿ ತಯಾರಿಸಲು ಉಪಯೋಗಿಸಿದ ಒಂದು ಇಡ್ಲಿಪಾತ್ರೆ ಇದರ ಮುಚ್ಚಳ ಒಂದು ಸ್ಟೀಲ್ ಬಟ್ಟಲು, ತೂತು ಇರುವ ಒಂದು ತಟ್ಟೆ, ಇವುಗಳನ್ನು ಸ್ವಾಧೀನಪಡಿಸಲಾಯಿತು.

4. ಮಹಜರನ್ನು ಮದ್ಯಾಹ್ನ 3.35 ರಿಂದ 4.35 ರವರೆಗೆ ಮಾಡಲಾಯಿತು. ನಂತರ ಠಾಣೆಗೆ ಬಂದು ವರದಿಯೊಂದಿಗೆ ಆರೋಪಿಯ ವಿರುದ್ದ ಮೊಕದ್ದಮೆ ಸಂಖ್ಯೆ: 133/2023 ಎಂದು ನಮೂದಿಸಿ ನ್ಯಾಯಾಲಯಕ್ಕೆ ಪ್ರ.ವ.ವರದಿಯನ್ನು ನಿವೇದಿಸಲಾಯಿತು, ವಶಪಡಿಸಿಕೊಂಡ ಸ್ವತ್ತುಗಳನ್ನು ಪಿ.ಎಫ್ ನಂಬರ್

181/2023 ಎಂದು ನಮೂದಿಸಿ ನ್ಯಾಯಾಲಯದ ಅನುಮತಿಗಾಗಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ, ನಂತರ ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಸಿಬ್ಬಂದಿಯ ಭದ್ರತೆಯಲ್ಲಿ ಕಳುಹಿಸಿಕೊಡಲಾಯಿತು, ನಂತರ ಸಾಕ್ಷಿದಾರರಾದ ಚಾಸಾ-2 ರಿಂದ 6 ರವರ ಹೇಳಿಕೆಯನ್ನು ಪಡೆಯಲಾಯಿತು.

5. ನಂತರ ಚಾಸಾ-5 ರವರು ಕೃತ್ಯ ಸ್ಥಳದಲ್ಲಿ ತೆಗೆದ ಫೋಟೋಗೆ ಸಂಬಂದಪಟ್ಟಂತೆ ನೀಡಿದ 65(ಬಿ) ದೃಡೀಕರಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಲಾಯಿತು. ದಿನಾಂಕ 25.08.2023 ರಂದು ಮಾದರಿಗಾಗಿ ಸಂಗ್ರಹಿಸದ ಪುಳಗಂಜಿ ವಿಧಿ-ವಿಜ್ಞಾನಕ್ಕೆ ಚಾಸಾ-9 ರವರ ಮೂಲಕ ಕಳುಹಿಸಿಕೊಟ್ಟಿರುತ್ತೇವೆ. ನಂತರ ಆರೋಪಿ ತಮ್ಮಯ್ಯರವರು ಮನೆಯಲ್ಲಿ ಇರುವ ಬಗ್ಗೆ ದೃಡೀಕರಣ ಪತ್ರವನ್ನು ಕೋರಿ ತೋಳೂರು ಶೆಟ್ಟಳ್ಳಿ ಚಾಸಾ-7 ರವರಿಗೆ ಸಲ್ಲಿಸಲಾಯಿತು. ನಂತರ ವಿಧಿ-ವಿಜ್ಞಾನಕ್ಕೆ ಕಳುಹಿಸಿರುವಂತಹ ಹಿಂಬರಹವನ್ನು ಪಡೆದುಕೊಂಡಿರುತ್ತೇನೆ. ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-10 ರವರಿಗೆ ವಹಿಸಲಾಯಿತು.

6. ಮಹಜರನ್ನು ಈಗಾಗಲೇ ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಸಿ) ಎಂದು, ಪ್ರ.ವ.ವರದಿಯನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ)ಎಂದು, ವಾಸದ ದೃಡೀಕರಣ ಕೋರಿಕೆಯ ಮನವಿ ಪತ್ರವನ್ನು ಮತ್ತು ವರದಿಯನ್ನು ನಿಪಿ-5 ಎಂದು ಸಾಕ್ಷಿಯ ಸಹಿ ನಿಪಿ-5(ಎ), ನಿಪಿ-6 ಮತ್ತು ಸಾಕ್ಷಿಯ ನಿಪಿ-6(ಎ) ಎಂದು, ಫೋಟೋ ನಿಪಿ-7 ಮತ್ತು 8 ಎಂದು, 65(ಬಿ) ದೃಡೀಕರಣ ಪತ್ರವನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ)ಎಂದು, ನಿವೇದನೆ ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10(ಎ)ಎಂದು, ರಸಾಯನಿಕ ಪರೀಕ್ಷೆಗೆ ಕಳುಹಿಸಿರುವ ಹಿಂಬರಹವನ್ನು ನಿಪಿ-11 ಎಂದು, ಮು.ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ, ಒಂದು ಪ್ಲಾಸ್ಟಿಕ್ ಡ್ರಮ್, ಒಂದು ಅಲ್ಯೂಮಿನಿಯಂ ಇಡ್ಲಿಪಾತ್ರೆ, ಒಂದು ಅಲ್ಯೂಮಿನಿಯಂ ಇಡ್ಲಿಪಾತ್ರೆ ತಟ್ಟೆ, ಸ್ಟೀಲ್ ಬಟ್ಟಲು, ಮಾದರಿಗಾಗಿ ತೆಗೆದಂತಹ ಎರಡು ಪ್ಲಾಸ್ಟಿಕ್ ಡಬ್ಬದಲ್ಲಿ ತಲಾ 200 ಮಿಲಿಯ ಪುಳಗಂಜಿ ಇವುಗಳನ್ನು ಮು.ಮಾ.1 ರಿಂದ ಮು.ಮಾ.6 ಎಂದು ಗುರುತಿಸಲಾಯಿತು, ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಶ್ರೀ.ಬಿ.ಇ. ಜೆ.ವಕೀಲರಿಂದ:</u>

1. ಘಟನಾ ಸ್ಥಳಕ್ಕೆ ಹೋದಾಗ ಪುಳಗಂಜಿಯನ್ನು ಕುಡಿಯುವವರ ಅಥವಾ ಇನ್ನಿತರೆ ಲೋಟಗಳ ನಿಶಾನೆಗಳು ಕಂಡು ಬಂದಿಲ್ಲ ಎಂದರೆ ಸರಿ, ಅವರ ಮನೆಯ ಯಾವುದೇ ವಾಹನಗಳು ಹೋಗಲು ಸಾಧ್ಯವಿಲ್ಲ ಎಂದರೆ ಸರಿ, ನಾನು ಹೇಳಿದ ಹಾಗೆ ಪಂಚರುಗಳಿಗೆ ಘಟನಾ ಸಂಬಂಧ ನೋಟಿಸು ಕೊಟ್ಟಿರುತ್ತೇವೆ ಎಂದರೆ ಸರಿ, ಆ ರೀತಿ ನೋಟಿಸು

ಕೊಟ್ಟಿದ್ದನ್ನು ಮಹಜರಿನಲ್ಲಿ ತಿಳಿಸಿರುತ್ತೇವೆ ಎಂದರೆ ಸರಿ, ನಿವೇದನೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ, ಆರೋಪಿಯ ಮನೆಯ ಅಕ್ಕ-ಪಕ್ಕ ಮನೆಗಳು ಇರುತ್ತದೆ ಎಂದರೆ ಸರಿ, ಸದರಿ ಮನೆಗಳು 70-80 ಅಡಿ ದೂರದಲ್ಲಿ ಇರುತ್ತದೆ, ಆರೋಪಿಯ ಮನೆಯ ಕೊಟ್ಟಿಗೆಯ ಸುತ್ತಳತೆಯು ನಮೂದು ಮಾಡಿಲ್ಲ, ಕೊಟ್ಟಿಯ ಯಾವ ಭಾಗದಲ್ಲಿ ಪುಳಗಂಜಿ ಇತ್ತು ಎಂದರೆ ಮುಂಭಾಗದಿಂದ ಎಡಭಾಗದಲ್ಲಿ ಇತ್ತು ಎಂದು ತಿಳಿಸಿರುತ್ತಾರೆ. ವಶಪಡಿಸಿಕೊಂಡಿರುವಂತಹ ಮುದ್ದೆಮಾಲುಗಳ ಮೇಲೆ ಪಂಚರಾಗಲೀ ಮತ್ತು ನಾವಾಗಲೀ ಸಹಿ ಮಾಡಿರುವುದಿಲ್ಲ ಎಂದರೆ ಸರಿ, ವಶಪಡಿಸಿಕೊಂಡಂತಹ ಮುದ್ದೆಮಾಲು ಕೊಟ್ಟಿಗೆ ಯಾರಿಗೆ ಸಂಬಂಧಪಟ್ಟಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ, ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿಲ್ಲ, ಈ ಕೇಸಿಗೋಸ್ಕರ ಸೃಷ್ಟಿಸಿಕೊಂಡಿದ್ದು ಎಂದರೆ ಸರಿಯಲ್ಲ. ಚಲನಾ-ವಲನಾ ಪುಸ್ತಕದಲ್ಲಿ ಘಟನಾ ಸ್ಥಳಕ್ಕೆ ಹೋದ ಬಗ್ಗೆ ನಮೂದು ಮಾಡುತ್ತೇವೆ ಎಂದರೆ ಸರಿ, ಮೌಖಿಕ ಆದೇಶದ ಮೇರೆಗೆ ಪುಳಗಂಜಿಯನ್ನು ನಾಶಪಡಿಸಿರುವ ಬಗ್ಗೆ ಎಲ್ಲಿಯೂ ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎದರೆ ಸರಿಯಲ್ಲ, ಮಹಜರನ್ನು ಠಾಣೆಯಲ್ಲಿ ಬರೆದಿರುತ್ತೇವೆ ಎಂದರೆ ಸರಿಯಲ್ಲ, ಮತ್ತು ರಸಾಯನಿಕ ಪರೀಕ್ಷೆಗೆ ಯಾವುದೇ ಮುದ್ದೆಮಾಲುಗಳನ್ನು ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ,

3. ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೆ ಸಂಬಂದಇಲ್ಲ ಎಂದರೆ ಸರಿಯಲ್ಲ, ಘಟನೆ ನಡೆದ ದಿನವನ್ನು ಇಲಾಖಾ ಪುಸ್ತಕದಲ್ಲಿ ನಮೂದು ಮಾಡಿರುವ ಬಗ್ಗೆ ಹಾಜರುಪಡಿಸಿಲ್ಲ, ಇಲಾಖಾ ಅಂಕಿ-ಅಂಶಕೋಸ್ಕರ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ, ಈ ವಸ್ತುಗಳಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

Sd/-

ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ

ಸೋಮವಾರಪೇಟೆ